KAYG030021782026

<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ</u>

ಉಪಸ್ಥಿತರು:- ಶ್ರೀ ಅರುಣ ಚೌಗುಲೆ
ಬಿ.ಎ.ಎಲ್ಎಲ್ಬಿ.
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಯಾದಗಿರಿ.

<u>ದಿನಾಂಕ **06** ನೇ ಜೂನ್ **2026**</u>

<u>ಕ್ರಿ.ಮಿಸ್. ನಂ.**1445/2026**</u>

| | | |
|---|---|---|
| ಅರ್ಜಿದಾರರು | : | 1. ಮಲ್ಲಪ್ಪ ಸೋಮಣ್ಣೋರ ತಂದೆ ದಿ.ಸಾಬಣ್ಣ, ವಃ 40 ವರ್ಷ, ಉಃ ಒಕ್ಕಲುತನ,<br><br>2. ಕಾಡಮ್ಮ ಗಂಡ ಮಲ್ಲಪ್ಪ ಸೋಮಣ್ಣೋರ, ವಃ 35 ವರ್ಷ, ಉಃ ಒಕ್ಕಲುತನ,<br><br>3. ಮಲ್ಲಮ್ಮ ತಂದೆ ದಿ.ಸಾಬಣ್ಣ, ವಃ 46 ವರ್ಷ, ಉಃ ಒಕ್ಕಲುತನ,<br><br>4. ಶಾಂತಮ್ಮ ತಂದೆ ದಿ.ಸಾಬಣ್ಣ, ವಃ 41 ವರ್ಷ, ಉಃ ಒಕ್ಕಲುತನ,<br><br>ಎಲ್ಲರೂ ಸಾಃ ಎಸ್.ಹೊಸಳ್ಳಿ ಗ್ರಾಮ, ತಾಃ ಮತ್ತು ಜಿಃ ಯಾದಗಿರಿ.<br><br>**(ಅರ್ಜಿದಾರರ ಪರ ಶ್ರೀ.ಆರ್.ಜೆ. ವಕೀಲರು)** |
| ಎದುರುದಾರರು | : | ಮಾನ್ಯ ತಹಸೀಲ್ದಾರರು ಯಾದಗಿರಿ. |
| | | **(ಎದುರುದಾರರು ಏಕಪಕ್ಷೀಯರು)** |

<u>**:: ಆದೇಶ ::**</u>

ಅರ್ಜಿದಾರರು ಈ ಅರ್ಜಿಯನ್ನು ಜನನ ಮತ್ತು ಮರಣ ನೋಂದಣಿ ಅಧಿನಿಯಮ, 1969 ರ ಕಲಂ 13(3) ರಡಿಯಲ್ಲಿ ಸಲ್ಲಿಸಿದ್ದಾರೆ.

**2.** <u>ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.</u>

1, 3 ಮತ್ತು 4 ನೇ ಅರ್ಜಿದಾರರ ತಂದೆ ಮತ್ತು 2 ನೇ ಅರ್ಜಿದಾರರ ಮಾವ ಸಾಬಣ್ಣ ತಂದೆ ಯಲ್ಲಪ್ಪ ಇವರು ದಿನಾಂಕಃ 10.08.1997 ರಂದು ಯಾದಗಿರಿ ತಾಲೂಕಿನ ಎಸ್.ಹೊಸಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ದಾಖಲೆಗಳನ್ನು ಪಡೆಯುವ ಸಲುವಾಗಿ ಅರ್ಜಿದಾರರಿಗೆ ಮರಣ ಪ್ರಮಾಣಪತ್ರದ ಅವಶ್ಯಕತೆ ಇರುತ್ತದೆ. ಅರ್ಜಿದಾರರು ಎದುರುದಾರರ ಕಛೇರಿಗೆ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದಕ್ಕೆ ಎದುರುದಾರರು ನೋಂದಣಿ ವಹಿಯನ್ನು ಪರಿಶೀಲಿಸಿ ಮರಣ ದಿನಾಂಕವು ಜನನ ಮತ್ತು ಮರಣಗಳ ನೊಂದಣಿ ವಹಿಯಲ್ಲಿ ನಮೂದಾಗಿಲ್ಲವೆಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಿ ದಿನಾಂಕ 10.08.1997 ರಂದು ಮರಣ ಹೊಂದಿದ್ದಾರೆಂದು ದಾಖಲಿಸಿಕೊಂಡು ಮರಣ ಪ್ರಮಾಣಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಬೇಕಾಗಿ ಕೋರಿಕೊಳ್ಳುತ್ತಾರೆ.

**3.** ಪ್ರಕರಣವನ್ನು ನೋಂದಾಯಿಸಿದ ನಂತರ ಎದುರುದಾರರಿಗೆ ನೋಟೀಸು ಕಳುಹಿಸಲಾಯಿತು. ಆದರೆ ಎದುರುದಾರರು ಹಾಜರಾಗದ ಕಾರಣ ಅವರನ್ನು ಏಕಪಕ್ಷೀಯ ಎಂದು ಪರಿಗಣಿಸಲಾಯಿತು.

**4.** ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಧರಿತ ತೀರ್ಪಿನ ಪ್ರಕಾರ ಎರಡು ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಲಾಯಿತು. ಯಾವುದೇ ವ್ಯಕ್ತಿಯು ನ್ಯಾಯಾಲಯದ ಮುಂದೆ ಹಾಜರಾಗಲಿಲ್ಲ ಹಾಗೂ ಅರ್ಜಿದಾರರ ಅರ್ಜಿಯನ್ನು ಪ್ರತಿರೋಧಿಸಿಲ್ಲ.

**5.** 1 ನೇ ಅರ್ಜಿದಾರರನ್ನು ಪ್ರಾಸಾ-1 ಎಂದು ಸಾಕ್ಷ್ಯ ಹೇಳಿಕೆ ಮಾಡಿಸಿದ್ದು, ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದು, ವಂಶವೃಕ್ಷ ದೃಢೀಕರಣ ಪತ್ರವನ್ನು ನಿಪಿ-2 ಎಂದು, 1 ನೇ ಅರ್ಜಿದಾರರ ಆಧಾರ್ ಕಾರ್ಡ್ ನೋಟರೈಸ್ಡ್ ಪ್ರತಿಯನ್ನು ನಿಪಿ-3 ಎಂದು ಮತ್ತು ದಿನಾಂಕ 30.04.2026 ರ ಕನ್ನಡ ದೀಪ ಮತ್ತು ಸಗರ ಸಂಭ್ರಮ ದಿನ ಪತ್ರಿಕೆಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಗಿದೆ.

**6.** ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಪ್ರಕರಣದ ಕಡತ ಪರಿಶೀಲಿಸಲಾಯಿತು.

**7.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

1. ಅರ್ಜಿದಾರರು ಸಾಬಣ್ಣ ತಂದೆ ಯಲ್ಲಪ್ಪ ಇವರು ದಿನಾಂಕಃ 10.08.1997 ರಂದು ಮರಣ ಹೊಂದಿರುತ್ತಾರೆ ಎಂದು ರುಜುವಾತು ಪಡಿಸುತ್ತಾರೆಯೆ?
2. ಯಾವ ಆದೇಶ?

**8.** ಈ ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ-

ಅಂಶ ನಂ.**1 :** ಸಕಾರಾತ್ಮಕವಾಗಿ
ಅಂಶ ನಂ.**2 :** ಅಂತಿಮ ಆದೇಶದಂತೆ ಈ ಕೆಳಕಾಣಿಸಿದ ಕಾರಣಗಳಿಗಾಗಿಃ-

ಕಾ ರ ಣ ಗ ಳು

**9. ಅಂಶ ನಂ.1 :** ಅರ್ಜಿದಾರರು ತಾವು ಸಲ್ಲಿಸಿದ ಅರ್ಜಿಗೆ ಪೂರಕವಾಗಿ 1 ನೇ ಅರ್ಜಿದಾರರನ್ನು ಪ್ರಾಸಾ-1 ಎಂದು ವಿಚಾರಣಗೆ ಒಳಪಡಿಸಿದ್ದು, ಪ್ರಾಸಾ-1 ರವರು ನ್ಯಾಯಾಲಯದ ಮುಂದೆ ತಮ್ಮ ಸಾಕ್ಷ್ಯ ಹೇಳಿಕೆ ಪ್ರಮಾಣ ಪತ್ರದಲ್ಲಿ ತಮ್ಮ ತಂದೆ ಸಾಬಣ್ಣ ತಂದೆ ಯಲ್ಲಪ್ಪ ಇವರು ದಿನಾಂಕಃ 10.08.1997 ರಂದು ಯಾದಗಿರಿ ತಾಲೂಕಿನ ಎಸ್.ಹೊಸಳ್ಳಿ ಗ್ರಾಮದ ಮನೆಯಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ಕೊಡುವಂತೆ ಎದುರುದಾರರಿಗೆ ಅರ್ಜಿ ಕೊಟ್ಟಾಗ ಮರಣವು ನೋಂದಣಿ ಆಗಿಲ್ಲ ಎಂದು ಅಲಭ್ಯ ಪ್ರಮಾಣಪತ್ರ ಕೊಟ್ಟಿರುತ್ತಾರೆ ಎಂದು ನುಡಿದಿದ್ದಾರೆ. ತಮಗೆ ಸಂಬಂಧಿಸಿದ ದಾಖಲೆಗಳನ್ನು ಪಡಯುವ ಸಲುವಾಗಿ ಮರಣ ಪ್ರಮಾಣಪತ್ರದ ಅವಶ್ಯಕತೆ ಇರುತ್ತದೆ ಎಂದು ಹೇಳುತ್ತಾರೆ. ಅರ್ಜಿಯಲ್ಲಿ ನಮೂದಿಸಿದ ಅಂಶಗಳನ್ನು ಹಾಗೂ ನಿಪಿ-2 ರ ವಂಶವೃಕ್ಷದ ದೃಢಿಕರಣ

ಪತ್ರವನ್ನು ಗಮನಿಸಲಾಗಿ ಮೃತರಿಗೆ ಅರ್ಜಿದಾರರನ್ನು ಹೊರತುಪಡಿಸಿ ಬೇರೆ ಯಾವುದೇ ವಾರಸುದಾರರು ಇರುವುದಿಲ್ಲ ಎಂದು ಕಂಡುಬರುತ್ತದೆ.

**10.** ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಐಎಲ್ಆರ್ **2000 (**ಕರ್ನಾಟಕ**)** ಪುಟ **4770** ರ **(**ಕರ್ನಾಟಕ ರಾಜ್ಯ ವಿರುದ್ಧ ಅನ್ನಕ**)** ನಿರ್ಣಯದಲ್ಲಿ**,**

> "A direction to make entry in birth and death register by the magistrate challenged on the ground that except the statement of applicant on oath, there material no was other held the magistrate in a proceedings U/s 13(3) only ascertains the birth of the child and date is not the material consideration as such directions binds only the registration office only to make an entry it doesn't has any higher probative value".

ಈ ಮೇಲಿನ ತೀರ್ಪು ಎಲ್ಲಾ ವಿಧದಲ್ಲಿಯೂ ಈ ಪ್ರಕರಣಕ್ಕೆ ಅನ್ವಯಿಸುತ್ತದೆ.

**11.** ಒಂದು ಜನನ/ಮರಣ ಪ್ರಮಾಣಪತ್ರವು ಜನನ/ಮರಣ ದಿನಾಂಕವನ್ನು ಸಿದ್ಧಪಡಿಸುವ ದಾಖಲೆಯಲ್ಲ. ಒಂದು ವೇಳೆ ಮರಣ ದಿನಾಂಕವು ಯಾವುದಾದರೂ ಪ್ರಕರಣದಲ್ಲಿ ವಿವಾದದಲ್ಲಿದ್ದರೆ ಮರಣ ಪ್ರಮಾಣ ಪತ್ರವನ್ನೇ ಸಾಕ್ಷಿಯೆಂದು ಪರಿಗಣಸುವಂತಿಲ್ಲ. ಆದ್ದರಿಂದ ಎದುರುದಾರರು ಮೃತರ ಮರಣ ದಿನಾಂಕವನ್ನು ನೋಂದಾಯಿಸಿಕೊಳ್ಳುವುದರಿಂದ ಯಾವುದೇ ಪೂರ್ವಕಲ್ಪಿತ ಅಭಿಪ್ರಾಯಕ್ಕೆ ಬಂದಂತೆ ಆಗುವುದಿಲ್ಲ. ಆದ್ದರಿಂದ ಮೃತರ ಮರಣ ದಿನಾಂಕವನ್ನು ನೋಂದಣಿ ಮಾಡಿ ಮರಣ ಪ್ರಮಾಣಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸುವುದು ನ್ಯಾಯಾದಾನದ ಹಿತದೃಷ್ಟಿಯಿಂದ ಸರಿಯೆಂದು ಈ ನ್ಯಾಯಾಲಯವು

ಅಭಿಪ್ರಾಯಪಡುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ಅಂಶ ನಂ.**1** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ**.**

**<u>12.</u>** <u>ಅಂಶ ನಂ.**2:**</u> ಅಂಶ ನಂ.1 ನ್ನು ಸಕಾರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಕಂಡ ಆದೇಶವನ್ನು ನ್ಯಾಯಾಲಯವು ಹೊರಡಿಸುತ್ತದೆ.

<u>ಆದೇಶ</u>

ಕಲಂ 13(3) ಜನನ ಮತ್ತು ಮರಣ ನೋಂದಣ ಅಧಿನಿಯಮ 1969 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿದೆ.

ಅರ್ಜಿದಾರರಿಂದ ಕಾನೂನಿನ ಅನುಸಾರ ಸೂಕ್ತ ದಂಡ ಪಡೆದ ನಂತರ ಸಾಬಣ್ಣ ತಂದೆ ಯಲ್ಲಪ್ಪ ಇವರ ಮರಣ ದಿನಾಂಕವನ್ನು ತಮ್ಮ ದಾಖಲೆ ಪುಸ್ತಕಗಳಲ್ಲಿ ದಿನಾಂಕಃ 10.08.1997 ಎಂದು ನೋಂದಾಯಿಸಿಕೊಳ್ಳುವಂತೆ ಎದುರುದಾರರಿಗೆ ನಿರ್ದೇಶಿಸಲಾಗಿದೆ.

s

ನೋಂದಣಿಯಾದ ನಂತರ ಅರ್ಜಿದಾರರು ಮರಣ ಪ್ರಮಾಣಪತ್ರದ ಪ್ರತಿಯನ್ನು ಎದುರುದಾರರಿಂದ ಪಡೆಯಬಹುದಾಗಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ **06** ನೇ ಜೂನ್ **2026** ರಂದು ತೀರ್ಪನ್ನು ಘೋಷಿಸಲಾಯಿತು)

**(**ಅರುಣ್ ಚೌಗುಲೆ**)**
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ**,** ಯಾದಗಿರಿ**.**

**KAYG030021782026**

<u>ಅನುಬಂಧ</u>

**1.** ಅರ್ಜಿದಾರರ ಪರ ಸಾಕ್ಷಿದಾರರ ಪಟ್ಟಿಃ

ಪ್ರಾಸಾ-1 : ಮಲ್ಲಪ್ಪ ಸೋಮಣ್ಣೋರ ತಂದೆ ದಿ.ಸಾಬಣ್ಣ.

**2.** ಅರ್ಜಿದಾರರ ಪರ ದಾಖಲೆಗಳ ಪಟ್ಟಿಃ

ನಿಪಿ-1 : ಅಲಭ್ಯ ಪ್ರಮಾಣ ಪತ್ರ.

ನಿಪಿ-2 : ವಂಶವೃಕ್ಷ ದೃಢಿಕರಣ ಪ್ರಮಾಣ ಪತ್ರ.

ನಿಪಿ-3 : 1 ನೇ ಅರ್ಜಿದಾರರ ಆಧಾರ್ ಕಾರ್ಡ್ ನೋಟರೈಸ್ಡ್ ಪ್ರತಿ.

ನಿಪಿ-4 & ನಿಪಿ-5 : ಪತ್ರಿಕಾ ಪ್ರಕಟಣೆಗಳು.

**3.** ಎದುರುದಾರರ ಪರ ವಿಚಾರಣೆ ಮಾಡಿದ ಸಾಕ್ಷಿದಾರರುಃ

-ಇಲ್ಲ-

**4.** ಎದುರುದಾರರ ಪರ ದಾಖಲೆಗಳ ಪಟ್ಟಿಃ

-ಇಲ್ಲ-

**(ಅರುಣ್ ಚೌಗುಲೆ)**
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಯಾದಗಿರಿ.